ಈ) ಜಲ ನಿರ್ಮಲ ಯೋಜನೆಯಡಿ ಪಂಚಾಯತಿಗಳು ರೂ. 50.00 ಲಕ್ಷ ವರೆಗಿನ ಕಾಮಗಾರಿ ಅನುಷ್ಠಾನಕ್ಕೆ ತಂದಿರುವಾಗ, ನೀರು ಪೂರೈಕೆ ಯೋಜನೆ ನಿರ್ವಹಣೆ ಏಕೆ ಸಾಧ್ಯವಿಲ್ಲ; (ವಿವರ ಒದಗಿಸುವುದು)

ಉ) ಇದರಿಂದ ಅಧಿಕಾರ ವಿಕೇಂದ್ರಿಕರಣ ನೀತಿಗೆ ತಿಲಾಂಜಲಿ ಕೊಟ್ಟಂತಾಗುವುದಿಲ್ಲವೇ; (ಪೂರ್ಣ ಮಾಹಿತಿ ಒದಗಿಸಿರಿ)?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಹೌದು.

ಆ) ಈ ಕುರಿತು ಇನ್ನು ಅಂತಿಮ ನಿರ್ಧಾರವಾಗಿಲ್ಲ.

ಇ) ಜಿಲ್ಲಾ ಪಂಚಾಯತಿ ಅಧ್ಯಕ್ಷರುಗಳ ಸಂಘ ಈ ಬಗ್ಗೆ ಮನವಿ ಸಲ್ಲಿಸಿದೆ.

ಈ) ಈಗ ರಾಜ್ಯದ ಗ್ರಾಮ ಪಂಚಾಯತ್‌ಗಳು ಕುಡಿಯುವ ನೀರು ಪೂರೈಕೆ / ನೈರ್ಮಲ್ಯ ಯೋಜನೆಗಳ ನಿರ್ವಹಣೆ ಮಾಡಲು ಸಮರ್ಥವಾಗಿವೆ.

ಉ) ಪಂಚಾಯತ್ ರಾಜ್ ಅಧಿನಿಯಮ, ಅದರಡಿ ರಚಿಸಿದ ನಿಯಮಗಳು ಮತ್ತು ಬೇಲೂರು ಘೋಷಣೆಯನ್ವಯ ಅಧಿಕಾರ ವಿಕೇಂದ್ರೀಕರಣ ಮಾಡುವ ನೀತಿಗೆ ಸರ್ಕಾರವು ಬದ್ಧವಾಗಿದೆ.

...

319 (519) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದವರು ಇತ್ತೀಚೆಗೆ ಐಎನ್‌ಜಿ ವೈಶ್ಯ ಬ್ಯಾಂಕ್‌ನಲ್ಲಿ ಫಿಕ್ಸೆಡ್ ಡಿಪಾಜಿಟ್‌ನಲ್ಲಿದ್ದ 5 ಕೋಟಿಗೂ ಹೆಚ್ಚು ಹಣವನ್ನು ಅವಧಿ ಮುಗಿಯುವ ಮೊದಲೇ ಯಾವುದೇ ಸಕಾರಣವಿಲ್ಲದೆ ವಾಪಸ್ಸು ಪಡೆದುಕೊಂಡು ಮತ್ತೊಂದು ಬ್ಯಾಂಕಿನಲ್ಲಿ ಜಮಾ ಮಾಡಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಈ ಕ್ರಮದಿಂದ ಪ್ರಾಧಿಕಾರಕ್ಕೆ ಲಕ್ಷಾಂತರ ರೂಪಾಯಿಯ ನಷ್ಟ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ರೀತಿ ಹಣ ವಾಪಸಾತಿಗೆ ಕಾರಣವೇನು ಹಾಗೂ ಇದರಲ್ಲಿ ಶಾಮೀಲಾಗಿರುವ ವ್ಯಕ್ತಿಗಳ ಮೇಲೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು)

ಅ) – ಹೌದು –

ಆ) – ಇಲ್ಲ –

ಇ) ಐಎನ್‌ಜಿ ವೈಶ್ಯ ಬ್ಯಾಂಕ್‌ನವರು ಉಳಿತಾಯ ಖಾತೆಯ ಒಂದು ಕೋಟಿ ಮೂರು ಸಾವಿರ ರೂಪಾಯಿಗಳನ್ನು ನಿಶ್ಚಿತ ಠೇವಣಿಯಾಗಿ ಪರಿವರ್ತಿಸಿ ಆ ಮೊಬಲಗಿಗೂ ಸಹ ನಿಶ್ಚಿತ ಠೇವಣಿಗೆ ನೀಡುತ್ತಿರುವ ದರದಲ್ಲಿಯೇ ಬಡ್ಡಿಯನ್ನು ನೀಡಲು ನಿರಾಕರಿಸಿದ ಕಾರಣ ಡಿಫಾಸಿಟನ್ನು ರಾಷ್ಟ್ರೀಕೃತ ಬ್ಯಾಂಕಿಗೆ ವರ್ಗಾವಣೆ ಮಾಡಲಾಗಿದೆ. ಇದರಲ್ಲಿ ಯಾವುದೇ ವ್ಯಕ್ತಿಗಳು ಶಾಮೀಲಾಗಿರುವುದಿಲ್ಲ.